**ಚಾಸಾ-21 ಪ್ರಾಸಾ-2**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.**

**ಸಿಸಿ. 26200/2011**

| | |
|---|---|
| **ಸಾಕ್ಷಿದಾರರ ಹೆಸರು** | ಆರ್.ಪ್ರಕಾಶ್. |
| **ತಂದೆಯ ಹೆಸರು** | ರಾಜಶೇಖರ್, |
| **ವಯಸ್ಸು** | 47 ವರ್ಷ |
| **ಉದ್ಯೋಗ** | ಎಎಸ್ ಐ, ಸಿದ್ದಾಪುರ ಪೊಲೀಸ್ ಠಾಣೆ. |
| **ವಾಸ** | ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 20.03.2025. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2007 ರಿಂದ 2014 ರವರೆಗೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.22.06.2011 ರಂದು ಅಂದಿನ ಪಿ.ಐ ರವರಾದ ವಿ.ಕೆ.ವಾಸುದೇವ್ ರವರು ನನಗೂ ಮತ್ತು ಚಾಸಾ-22 ರಿಂದ 25 ರವರೆಗೂ ಈ ಪ್ರಕರಣದಲ್ಲಿ ಆರೋಪಿತರನ್ನು ಪತ್ತೆ ಮಾಡಿ ಠಾಣೆಗೆ ಹಾಜರುಪಡಿಸಲು ಮೌಖಿಕವಾಗಿ ಆದೇಶ ಮಾಡಿರುತ್ತಾರೆ. ಅದರಂತೆ ನಾವು ಆರೋಪಿತರ ಪತ್ತೆ ಕಾರ್ಯದಲ್ಲಿರುವಾಗ ದಿ.24.06.2011 ರಂದು ರಾತ್ರಿ 08.10 ಗಂಟೆಗೆ ಕುರುಬರ ಹಳ್ಳಿ ಬಸ್ ನಿಲ್ದಾಣದ ಸಮೀಪದ ಕರ್ನಾಟಕ ಲೇಔಟ್ ನಂ.73 ಕಟ್ಟಡದ ಒಂದನೇ ಮಹಡಿಯಲ್ಲಿ ಈ ಪ್ರಕರಣದ ಆರೋಪಿತರು ಇರುವ ಬಗ್ಗೆ ಬಾತ್ಮಿದಾರರಿಂದ ಖಚಿತ ಮಾಹಿತಿ ತಿಳಿದು ಬಂದು ಅದರ ಆಧಾರದ ಮೇಲೆ ನಾವುಗಳು ರಾತ್ರಿ 08.15 ಗಂಟೆಗೆ ಮಾಹಿತಿ ಬಂದಿದ್ದ ಮನೆಯ ಒಳಗೆ ಹೋಗಿ ನೋಡಲಾಗಿ ಮೂರು ಜನ ಆಸಾಮಿಗಳು ಇದ್ದು ನಮ್ಮಗಳನ್ನು ನೋಡಿ ಹೊರಗೆ ಓಡಿ ಹೋಗಲು ಪ್ರಯತ್ನ ಪಟ್ಟಿರುತ್ತಾರೆ. ನಂತರ ನಾವುಗಳು ಅವರನ್ನು ಸುತ್ತುವರೆದು ಅವರನ್ನು ಹಿಡಿದುಕೊಂಡು ನಮ್ಮಗಳನ್ನು ನೋಡಿ ಓಡಿ ಹೋಗಲು ಪ್ರಯತ್ನ ಪಟ್ಟ ಬಗ್ಗೆ ವಿಚಾರ ಮಾಡಲಾಗಿ ಆಸಾಮಿಗಳು ಸುಮಾರು 20 ದಿನಗಳ ಹಿಂದೆ ಕೂಡ್ಲು ಗೇಟ್ ಬಳಿಯ ಟ್ರಾನ್ಸ್ ಪೋರ್ಟ್ ಆಫೀಸ್ ಬಳಿ ನಿಲ್ಲಿಸಿದ್ದ ಎರಡು ಲಾರಿಗಳಲ್ಲಿದ್ದ ಜೀಟ್

**ಚಾಸಾ-21 ಪ್ರಾಸಾ-2**

ಫ್ಯಾಂಟ್ ಬಟ್ಟೆಗಳನ್ನು ಅಲ್ಲಿಂದ್ದ ಸೆಕ್ಯೂರಿಟಿ ನಿಜಾಮುದ್ದೀನ್ ಜೊತೆ ಸೇರಿಕೊಂಡು ಕಳುವು ಮಾಡಿ ಮಾಲುಗಳನ್ನು ತಮಿಳುನಾಡಿನ ಚೆನ್ನೈಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೊಂಡು ಖರ್ಚು ಮಾಡಿರುವುದಾಗಿ ತಿಳಿಸಿರುತ್ತಾರೆ. ಅವರುಗಳು ನಮ್ಮ ಕೇಸಿನ ಆರೋಪಿತರು ಎಂದು ದೃಢಪಟ್ಟ ಮೇರೆಗೆ ಆರೋಪಿತರ ಹೆಸರುಗಳನ್ನು ಕೇಳಲಾಗಿ ಮುರುಗನ್, ವೇಣು ಮತ್ತು ಕಮಲ್ ಶೆಟ್ಟಿ ಎಂಬುದಾಗಿ ತಿಳಿಸಿದ್ದು ಅವರುಗಳನ್ನು ವಶಕ್ಕೆ ಪಡೆದು ನಮ್ಮಗಳ ಜೊತೆ ಕರೆದು ಕೊಂಡು ಅದೇ ರೀತಿ ರಾತ್ರಿ 09.15 ಗಂಟೆ ಸಮಯಕ್ಕೆ ಪರಪ್ಪನ ಅಗ್ರಹಾರ ಪೊಲೀಸ ಠಾಣೆಗೆ ಕರೆದುಕೊಂಡು ಠಾಣೆಯಲ್ಲಿದ್ದ ಎಎಸ್ ಐ ಶಿವಣ್ಣ ರವರ ಮುಂದೆ ಹಾಜರುಪಡಿಸಿದ್ದು ವರದಿಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ. ವಕೀಲರಿಂದ 2ರಿಂದ 4 ಆರೋಪಿತರ ಪರ ಗೈರು ಹಾಜರಿದ್ದು ಪಾಟಿಸವಾಲು ಮಾಡಲು ಆರೋಪಿತರನ್ನು ಕೇಳಲಾಗಿ, ನಮ್ಮ ವಕೀಲರು ಮಾಡುತ್ತಾರೆ ಎಂದು ಹೇಳಿರುತ್ತಾರೆ. ಸದರಿ ಪ್ರಕರಣವು ಸುಮಾರು 15 ವರ್ಷಗಳ ಹಿಂದಿನ ಹಳೆಯ ಪ್ರಕರಣವಾಗಿದ್ದು ಕಾಲವಕಾಶ ನೀಡಲು ಸಮಂಜಸ ಕಾರಣಗಳು ಇರದೇ ಇರುವ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**